**ಓ ಎಸ್ 101/2023 ಪಿಡಬ್ಲ್ಯೂ3**

**ಸಾಕ್ಷಿಯನ್ನು ದಿಃ 04.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಮ್ಮ ಹಾಗೂ ವಾದಿಯ ಊರು 4 ಕಿಲೋ ಮೀಟರ್ ಅಂತರದಲ್ಲಿ ಇದೆ. ವಾದಿಯು 4 ವರೆ ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿದ್ದಾರೆ. ಆ ಜಮೀನು ಅವರಿಗೆ ದರಖಾಸ್ತು ಮೂಲಕ ಬಂದಿದೆ. ಅವರ ಹೆಸರಿನಲ್ಲಿ ಜಮೀನು ಇರುವ ಬಗ್ಗೆ ಆರ್ ಟಿ ಸಿ ನೋಡಿಲ್ಲ. ದಾವಾ ಆಸ್ತಿ ಅಲ್ಲದೆ ಬೇರೆ ಆಸ್ತಿಯೂ ಸಹ ವಾದಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಸ್ವಾಮಿಗೌಡರ ಜಮೀನು ಇದೆ. ಪೂರ್ವಕ್ಕೆಃ ಸ್ವಾಮಿಗೌಡರ ಜಮೀನು. ದಕ್ಷಿಣಕ್ಕೆಃ ಸರ್ಕಾರಿ ಜಮೀನು, ಉತ್ತರಕ್ಕೆಃ ಸ್ವಾಮಿಗೌಡರ ಜಮೀನು. ಈ ದಾವೆಯ ಬಗ್ಗೆ ನನಗೆ ಏನೂ ಗೊತ್ತಿಲ್ಲದೆ ಇದ್ದರೂ ಸಹ ವಾದಿಯು ನನಗೆ ಪರಿಚಯ ಇರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ನಾನು ಜಮೀನನ್ನು ಹೊಂದಿದ್ದೇನೆ. ಅದರ ಸರ್ವೆ ನಂ. 75. ಅದರ ವಿಸ್ತೀರ್ಣ 0.24 ಗುಂಟೆ ಇದೆ. ನಮ್ಮ ಜಮೀನು ಮತ್ತು ವಾದಿಯ ಜಮೀನಿನ ನಡುವೆ ಸುಮಾರು 100 ಅಡಿ ಅಂತರವಿದೆ. ವಾದಿಯ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನು ಇಲ್ಲ. ಈ ದಾವೆಯ ಬಗ್ಗೆ ನನಗೆ ಏನು ಗೊತ್ತಿಲ್ಲದೆ ಇದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**